ಚಿಕ್ಕನಾಯಕನಹಳ್ಳಿ ಪ್ರಾಥಮಿಕ ಕೇಂದ್ರಕ್ಕೆ ಮಹಿಳಾ ವೈದ್ಯಾಧಿಕಾರಿಗಳ ನೇಮಕ

346 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕನಾಯಕನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದೆ ರೋಗಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಎಷ್ಟು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇದೆ?*

ಇ) *ಇದನ್ನು ಭರ್ತಿ ಮಾಡಲು ಸರ್ಕಾರದ ವತಿಯಿಂದ ಮಾಡಿರುವ ಪ್ರಯತ್ನವೇನು?*

ಈ) *ಈ ಹುದ್ದೆಯನ್ನು ಭರ್ತಿ ಮಾಡಲು ನಿರ್ದಿಷ್ಟ ದಿನದೊಳಗೆ ಕಾರ್ಯಕ್ರಮ ಹಾಕಿಕೊಳ್ಳಲಾಗುವುದೇ?*

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ದಿನಾಂಕ : 26-9-94 ರಿಂದ ಖಾಲಿ ಇದೆ.

ಇ) 1998ನೇ ಸಾಲಿನ ವರ್ಗಾವಣೆ ಸಮಯದಲ್ಲಿ ಈ ಹುದ್ದೆ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಆದ್ಯತೆ ಮೇಲೆ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಅವರು ಉತ್ತರದಲ್ಲಿ ಹೇಳಿದ್ದಾರೆ, 1994ನೇ ಇಸವಿಯಿಂದ ಚಿಕ್ಕನಾಯ್ಕನಹಳ್ಳಿಯಲ್ಲಿ ಮಹಿಳಾ ವೈದ್ಯರು ಇಲ್ಲವೆಂದು ಹೇಳಿದ್ದಾರೆ. ವಾಸ್ತವವಾಗಿ ಅದರ ಎರಡು ವರ್ಷ ಹಿಂದಿನಿಂದಲೂ ಅವರು ಇಲ್ಲ. ಅವರು ರಜೆಯನ್ನು ಹಾಕಲಿಲ್ಲ ಮತ್ತು ಡ್ಯೂಟಿಯನ್ನೂ ಮಾಡಲಿಲ್ಲ. ಹಾಗಾಗಿ, 5-6 ವರ್ಷಗಳಿಂದ ಇಡೀ ನನ್ನ ಕ್ಷೇತ್ರದಲ್ಲಿ ಒಂದು ಆಸ್ಪತ್ರೆಯಲ್ಲೂ ಮಹಿಳಾ ವೈದ್ಯಾಧಿಕಾರಿಗಳು ಇಲ್ಲ. ನಾನು ಇದನ್ನು ಮೊದಲೇ ಇಲ್ಲಿ ಪ್ರಸ್ತಾಪ ಮಾಡಿದ್ದೆ. ಸ್ಯಾಂಕ್ಷನ್ ಪೋಸ್ಟೇ ಇಲ್ಲವೆಂದು ಅವತ್ತು ಆರೋಗ್ಯ ಸಚಿವರು ಉತ್ತರ ಕೊಟ್ಟಿದ್ದರು. ಇವೆಲ್ಲಾ ಸ್ಯಾಂಕ್ಷನ್ಡ್ ಪೋಸ್ಟ್‌ಗಳು, ಇವುಗಳನ್ನು ತುಂಬುವ ಕೃಪೆ ಮಾಡುತ್ತೀರಾ? ಗ್ರಾಮೀಣ ಪ್ರದೇಶದಲ್ಲಿರುವ ಹೆಣ್ಣು ಮಕ್ಕಳಿಗೆ ಏನಾದರೂ ಆರೋಗ್ಯದ ಕಡೆ ಗಮನ ಹರಿಸುತ್ತೀರಾ ಎಂದು ಸರ್ಕಾರವನ್ನು ಕೇಳಲಿಕ್ಕೆ ಬಯಸುತ್ತೇನೆ.

ಡಾ|| ಎಂ. ಶಂಕರನಾಯಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಅಲ್ಲಿ ರಮಾದೇವಿ ಎಂಬ ಲೇಡಿ ಡಾಕ್ಟರು ಕೆಲಸ ಮಾಡುತ್ತಾ ಇದ್ದರು. 26-9-94 ರಿಂದ ಅವರ ವರ್ಗಾವಣೆಯಾಗಿದೆ, ಮತ್ತೆ ಅಲ್ಲಿಗೆ ಪೋಸ್ಟಿಂಗ್ ಆಗಿಲ್ಲ. ಇದು ತಮಗೆ ಗೊತ್ತಿದ್ದಹಾಗೆ ಎಲ್ಲಾಕ್ಷೇತ್ರಗಳಲ್ಲಿ, ಎಲ್ಲಾ ಕಡೆಯಲ್ಲಿ ಆಗಿರತಕ್ಕ ಒಂದು ಸಮಸ್ಯೆ. ಒಂದುವೇಳೆ ಈ ಮಹಿಳಾ ವೈದ್ಯರನ್ನು

ಪೋಸ್ಟ್ ಮಾಡಿದರೂ ಕೂಡ ಗ್ರಾಮಾಂತರ ಪ್ರದೇಶಗಳಿಗೆ ಹೋಗತಕ್ಕಂಥಾದ್ದು ಕಷ್ಟ. ಏನು ಪಿ.ಎಸ್.ಸಿ. ಯಿಂದ ಆಯ್ಕೆಯಾಗಿದ್ದಾರೆ, ಅವರೂ ಸಹ ಬಂದು ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಇದನ್ನು ಯಾವತರಹ ಬಗೆಹರಿಸಬೇಕೆಂದು ಸರ್ಕಾರಕ್ಕೆ ಗೊತ್ತಾಗುತ್ತಾ ಇಲ್ಲ. ಅದಕ್ಕಾಗಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಯಾರಾದರೂ ಬಂದಲ್ಲಿ ಆ ಜಿಲ್ಲೆಯಲ್ಲಿ ಕೆಲಸ ಮಾಡುವಂಥವರಿದ್ದರೆ ನೇಮಕಾತಿ ಮಾಡಿಕೊಳ್ಳಿ ಎಂದು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಆದರೆ, ತಾವು ಹೇಳಿದಂಥ ಪೋಸ್ಟ್ 1994ರಿಂದ ಖಾಲಿ ಇದೆ. ಇದನ್ನು ಸಾಮಾನ್ಯ ವರ್ಗಾವಣೆಯಲ್ಲಿ ಆದ್ಯತೆ ಮೇಲೆ ತುಂಬುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಮಗೆ ಗೊತ್ತಿರಬೇಕು, ತಾಲ್ಲೂಕುಮಟ್ಟದಲ್ಲಿ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರ ಹುದ್ದೆ ಖಾಲಿ ಇದ್ದರೆ, ನೀವು ಕಾಂಟ್ರಾಕ್ಟ್ ಆಧಾರದ ಮೇಲೆ ತುಂಬುವುದಕ್ಕೆ ಬರುವುದಿಲ್ಲ. ನೀವು ಇಲ್ಲಿಂದಲೇ ಕೊಡಬೇಕು. ಬಾಲವನ್ನೇ ನಾಯಿ ಅಲ್ಲಾಡಿಸುತ್ತಿದೆ ಎಂದು ತಾವು ಹೇಳಿದಹಾಗೆ ಇವತ್ತು ಆಯಿತು. ಅವರು ಸರ್ಕಾರ ಅಲ್ಲಾಡಿಸುವುದು. ಈಗ ನಾಯಿ ಬಾಲ ಅಲ್ಲಾಡಿಸುವ ಹಾಗೆ ಇಲ್ಲ. ತಾವು ಏನು ಹೇಳುತ್ತಿದ್ದೀರಿ; 5 ವರ್ಷಗಳಿಂದ ಅಲ್ಲಿ ವೈದ್ಯಾಧಿಕಾರಿಗಳನ್ನು ತುಂಬುವುದಕ್ಕಾಗಲ್ಲ, ಅವರು ಯಾರೂ ಹೋಗುವುದಿಲ್ಲವೆಂದರೆ ಹೇಗೆ? ಹಾಗಾದರೆ, ನೀವು ಅವರಿಗೆ ಕೆಲಸ ಕೊಟ್ಟಿಲ್ಲವೇ? ಎಲ್ಎಂ ಓ ಪೋಸ್ಟ್ ಖಾಲಿ ಇರುವುದನ್ನು ಲೆಕ್ಕಕ್ಕೆ ತೆಗೆದುಕೊಂಡು ತಾನೇ ನೀವು ಪಿ.ಎಸ್.ಸಿ ನಲ್ಲಿ ರೆಕ್ರೂಟ್‌ಮೆಂಟ್ ಮಾಡುವುದು. ಅವರು ಏಕೆ ಹೋಗಲಿಲ್ಲ, ಅವರನ್ನು ನೀವು ಮನೆಗೆ ಕಳುಹಿಸಿ. ಒಂದು ಆರ್ಡರ್ ಮಾಡಿಸಿಬಿಡಿ. ಪಿ.ಎಸ್.ಸಿ.ನಲ್ಲಿರತಕ್ಕ ಎಲ್ ಎಂ ಓ ವೈದ್ಯಾಧಿಕಾರಿ ಹುದ್ದೆಯನ್ನೂ ಕೂಡ, ಡಿ.ಸಿ.ಯವರೇ ಆದೇಶ ಕೊಟ್ಟು ಅಪಾಯಿಂಟ್ ಮಾಡಬಹುದೆಂಬ ಸಣ್ಣ ಆದೇಶವನ್ನು ಸರ್ಕಾರ ಕೊಟ್ಟರೆ, ನಾವು ಅಲ್ಲೇ ಅವರನ್ನು ಕೇಳಿಕೊಂಡು, ಏನಾದರೂ ಮಾಡಿಕೊಂಡು ಭರ್ತಿ ಮಾಡಿಸಿಕೊಳ್ಳುತ್ತೇವೆ.

ಡಾ॥ ಎಂ. ಶಂಕರನಾಯಕ್: ಮಾನ್ಯ ಅಧ್ಯಕ್ಷರೇ, ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳು ಸಾಕಷ್ಟು ಇದ್ದರೂ ಕೂಡ ಮಹಿಳಾ ವೈದ್ಯರೇ ಕಡಿಮೆ ಇದ್ದಾರೆ. ಅದಕ್ಕೆ ನಾವು ಈ ಸಾಮಾನ್ಯ ವರ್ಗಾವಣೆಯಲ್ಲಿ ತಾಲ್ಲೂಕುಮಟ್ಟದಲ್ಲಿ ತುಂಬಲಿಕ್ಕೆ ಆಗದೇ ಇದ್ದಪಕ್ಷದಲ್ಲಿ, ಅಲ್ಲಿಯೂ ಸಹ ಕಾಂಟ್ರಾಕ್ಟ್ ಮೇಲೆ ತುಂಬಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ಡಾಕ್ಟರಾಗಿ ನೇಮಕ ಹೊಂದಿದವರು ಸರ್ಕಾರಿ ಆಜ್ಞೆ ಪ್ರಕಾರ ಹೋಗಿ ರಿಪೋರ್ಟ್ ಮಾಡಿಕೊಳ್ಳಬೇಕು. ಆದರೆ, ಅವರು ಹೇಳಿದಂತೆ ಸರ್ಕಾರ ಕೇಳತಕ್ಕ ದುಸ್ಥಿತಿ ಬಂದಿದೆ. ಅದು ಆಗಬಾರದು. ಯಾರು ಈ ರೀತಿ ಸರ್ಕಾರದ ಉದ್ಯೋಗ ಪಡೆದುಕೊಂಡು, ಹೋಗಿ ರಿಪೋರ್ಟ್ ಮಾಡಿಕೊಳ್ಳುತ್ತಾ ಇಲ್ಲ ಅವರನ್ನು ಟರ್ಮಿನೇಟ್ ಮಾಡತಕ್ಕ ವ್ಯವಸ್ಥೆಯನ್ನಾದರೂ ಮಾಡಿ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಎರಡನೆಯದಾಗಿ, ಪಿ.ಎಸ್.ಸಿ. ಯಿಂದ ತಾಲ್ಲೂಕುಮಟ್ಟದಲ್ಲಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ತುಂಬುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಅದನ್ನು ಎಕ್ಸ್‌ಟೆಂಡ್ ಮಾಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ.

ಡಾ|| ಎಂ. ಶಂಕರನಾಯಕ್ : ಎಷ್ಟು ಮಹಿಳಾ ವೈದ್ಯರ ಪೋಸ್ಟ್‌ಗಳಿವೆಯೋ ಅದಕ್ಕಿಂತ ಕಡಿಮೆ ಮಹಿಳಾ ವೈದ್ಯರು ಇದ್ದಾರೆ. ತಮಗೆ ಗೊತ್ತಿದೆ. ಪಿ.ಎಸ್.ಸಿ. ಯಿಂದ ರೆಕ್ರೂಟ್‌ಮಾಡಿಕೊಂಡು ಏನಾದರೂ ಮಾಡೋಣವೆಂದರೆ, ಅವರು ಬಂದು ರಿಪೋರ್ಟ್ ಮಾಡಿಕೊಂಡಿಲ್ಲ. ಇದನ್ನು ಬಗೆಹರಿಸಬೇಕಾಗಿರುವುದೇ ಒಂದು ಸಮಸ್ಯೆಯಾಗಿದೆ. ಇದು ಎಲ್ಲಾ ಕ್ಷೇತ್ರಗಳಲ್ಲೂ ಇದೆ, ನನ್ನ ಕ್ಷೇತ್ರದಲ್ಲೂ ಇದೆ, ಮಾನ್ಯ ಅಧ್ಯಕ್ಷರ ಕ್ಷೇತ್ರದಲ್ಲೂ ಈ ಸಮಸ್ಯೆ ಇರಬಹುದು. ಎಲ್ಲಾ ಕ್ಷೇತ್ರಗಳಲ್ಲೂ ಇರತಕ್ಕ ಸಮಸ್ಯೆ; ಅನೇಕ ಜನ ವೈದ್ಯರು ಏನು ಭಾವಿಸಿದ್ದಾರೆಂದರೆ, ನಾವು ಪ್ರಾಕ್ಟೀಸ್ ಮಾಡಿದರೆ ಜಾಸ್ತಿ ಹಣ ಗಳಿಸಬಹುದು, ಸರ್ಕಾರಿ ಅದೂ ಗ್ರಾಮಾಂತರ ಪ್ರದೇಶಕ್ಕೆ ಏಕೆ ಹೋಗಬೇಕೆಂಬ ಭಾವನೆ ಅನೇಕರಲ್ಲಿ ಇದೆ. ಅವರು ಪಿ.ಎಸ್.ಸಿ.ಯಿಂದ ಸೆಲೆಕ್ಟ್ ಮಾಡುವವರೆಗೂ ಸುಮ್ಮನೇ ಇರುತ್ತಾರೆ. ಆದನಂತರ, ಇದೆಲ್ಲಾ ಶುರು ಮಾಡುತ್ತಾರೆ.

ಅಧ್ಯಕ್ಷರು : ಅವರು ಪ್ರೈವೇಟ್ ಪ್ರಾಕ್ಟೀಸ್ ಮಾಡಿ, ಹೆಚ್ಚು ಸಂಪಾದನೆ ಮಾಡಿಕೊಳ್ಳುವುದಕ್ಕೆ ಮಾನ್ಯ ಸದಸ್ಯರ ಆಕ್ಷೇಪಣೆ ಇಲ್ಲ. ಸರ್ಕಾರಿ ನೌಕರಿಯಲ್ಲಿ ಉಳಿದುಕೊಂಡು, ಅನ್‌ಅಥರೈಸ್ಡ್ ಅಬ್ಸೆಂಟ್ ಆಗಿ ಆ ವೇಕೆನ್ಸಿಯನ್ನು ಭರ್ತಿ ಮಾಡುವುದಕ್ಕೂ ಬಿಡದೆ, ಅವರು ರಾಜೀನಾಮೆಯನ್ನೂ ಕೊಡದೇ ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಾ ಇದ್ದರೆ, ಜನರಿಗೆ ತೊಂದರೆಯಾಗುತ್ತದೆ ಎಂಬುದು ಅವರ ಭಾವನೆ.

ಡಾ|| ಎಂ. ಶಂಕರನಾಯಕ್ : ಮೊದಲು ಪಿ.ಎಸ್‌ಯಿಂದ ಸೆಲೆಕ್ಟ್ ಆದರೂ ಕೂಡ, ಅವರು ಸರ್ಕಾರಿ ಕೆಲಸದ ಮೇಲೆ ಬಂದು, ರಿಪೋರ್ಟ್ ಮಾಡಿಕೊಳ್ಳುವುದಕ್ಕೇ ತಯಾರಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ರಮಾದೇವಿ ಎಂಬುವರು ಎರಡು ವರ್ಷಗಳು ಅನ್ ಅಥರೈಸ್ಡ್ ಅಬ್ಸೆಂಟ್ ಆದರು. ಅದಾದ ಮೇಲೆ ತಿಪಟೂರಿನಿಂದ ತಾರಾದೇವಿ ಎಂಬುವರನ್ನು ಡೆಪ್ಯೂಟ್ ಮಾಡಿದರು. ಅವರೂ ಎರಡು ವರ್ಷದಿಂದ ಬಂದಿಲ್ಲ. 6 ವರ್ಷಗಳಿಂದ ಚಿಕ್ಕನಾಯ್ಕನಹಳ್ಳಿ ಆಸ್ಪತ್ರೆಗೆ ಮಹಿಳಾ ವೈದ್ಯರು ಬರಲೇ ಇಲ್ಲ. ಅಲ್ಲಿಯ ಜನ ಬೇರೆ ಮಾತನಾಡುತ್ತಾರೆ.

ಅಧ್ಯಕ್ಷರು : ಅಲ್ಲಿಗೆ "ದೇವಿ" ಎಂಬುವವರನ್ನು ಹಾಕಬೇಡಿ. ಅಂತಹವರು ಆ ಊರಿಗೆ ಹೋಗುವಹಾಗೆ ಕಾಣುವುದಿಲ್ಲ. ಆದ್ದರಿಂದ, ಸಿಂಪಲ್ ಆಗಿರುವವರನ್ನು ಹಾಕಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ದೇವಿಯವರನ್ನು ಹಾಕುತ್ತಾರೋ, ಚೌಡೇಶ್ವರಿಯರನ್ನು ಹಾಕುತ್ತಾರೋ ಅದಲ್ಲ.

ಡಾ|| ಎಂ. ಶಂಕರನಾಯಕ್ : ಮಾನ್ಯ ಸದಸ್ಯರು ಇಂಥವರನ್ನು ಹಾಕಿಕೊಡಿ ಎಂದು ಹೇಳಿದರೆ, ಅಂತಹವರನ್ನೇ ಅಲ್ಲಿಗೆ ಹಾಕಿಕೊಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನ ಪ್ರಶ್ನೆ ಅದಲ್ಲ. ತಾವು ತಾಲ್ಲೂಕುಮಟ್ಟದ ಆಸ್ಪತ್ರೆಗಳಿಗೆ ಕೂಡ ಕಾಂಟಾಕ್ಟ್ ಬೇಸಿಸ್ ಮೇಲೆ ತುಂಬುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ? ಇವತ್ತು ಇರತಕ್ಕ ಆದೇಶದಲ್ಲಿ ತಾಲ್ಲೂಕುಮಟ್ಟದ ಆಸ್ಪತ್ರೆಗಳು.....

ಅಧ್ಯಕ್ಷರು : ಈಗಾಗಲೇ ಅವರು ಇದಕ್ಕೆ ಉತ್ತರ ಹೇಳಿದ್ದಾರೆ. ಎಕ್ಸ್‌ಟೆಂಡ್ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಕಾಂಟ್ರಾಕ್ಟ್ ಡಾಕ್ಟರ್ಸ್‌ಗೆ ಇವರು ಪರ್ಮಿಷನ್ ಕೊಟ್ಟರೆ, ಅವರು ಬರುತ್ತಾರೆ. ಬರುವುದಿಲ್ಲವೆಂಬುದೇನೂ ಇಲ್ಲ.

ಅಧ್ಯಕ್ಷರು : ಮಾಡುತ್ತೇವೆಂದು ಹೇಳಿದ್ದಾರೆ.

ಉಳ್ಳಾಲದ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆ.

348 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವ ನೇತ್ರಾವತಿ ನದಿ ನೀರು ಯೋಜನೆ ಈಗ ಯಾವ ಹಂತದಲ್ಲಿದೆ?

ಆ) ಈ ಯೋಜನೆಯ ರೂಪುರೇಷೆಗಳೇನು, ಇದಕ್ಕಾಗಿ ಎಷ್ಟು ಹಣ ನಿಗದಿಪಡಿಸಲಾಗಿದೆ?

ಇ) ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉಳ್ಳಾಲ ಗ್ರಾಮಾಂತರ ಪ್ರದೇಶಗಳಾದ ಕೊಣಜೆ ಮತ್ತು ಇತರ 8 ಗ್ರಾಮಗಳಿಗೆ ಕುಡಿಯುವ ನೀರಿನ ಶಾಶ್ವತ ವ್ಯವಸ್ಥೆಗಾಗಿ ನೇತ್ರಾವತಿ ನದಿಯಿಂದ ಶುದ್ಧೀಕರಿಸಿದ ನೀರು ಸರಬರಾಜು ಮಾಡಲು ರೂ. 13.46 ಕೋಟಿ ಅಂದಾಜಿನ ಯೋಜನೆಯನ್ನು ತಯಾರಿಸಲಾಗಿದೆ.

ಇ) ಈ ಯೋಜನೆ ಇನ್ನೂ ಮಂಜೂರಾಗಬೇಕಾಗಿರುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದ ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ಬಗ್ಗೆ ನಾನು ಒತ್ತಾಯ ಮಾಡುತ್ತಿದ್ದೇನೆ. ಕಳೆದ ವರ್ಷ ರಾಜ್ಯಸರ್ಕಾರ ಈ ಯೋಜನೆಗೆ ಮಂಜೂರಾತಿ ಕೊಟ್ಟು, ಕೇಂದ್ರ ಸರ್ಕಾರದ ರಾಜೀವ್‌ಗಾಂಧಿ ಪ್ರತಿಷ್ಠಾನಕ್ಕೆ ಕಳುಹಿಸಿಕೊಟ್ಟಿದ್ದಾರೆ. ನನಗೆ ಗೊತ್ತಿರುವಮಟ್ಟಿಗೆ, ಕೇಂದ್ರ ಸರ್ಕಾರ50 ಕೋಟಿ ರೂಪಾಯಿ ಕೊಟ್ಟು ವಾಪಸ್ ಕಳುಹಿಸಿ, ರಾಜ್ಯಸರ್ಕಾರವೇ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ದಯವಿಟ್ಟು ಇದನ್ನು ತಕ್ಷಣ ಕಾರ್ಯಗತಗೊಳಿಸಿ, ಈಗಲೂ ಕೂಡ ಪರಿಶೀಲನೆ ಮಾಡುತ್ತೇವೆ ಎಂದು ಹೇಳುವುದು ಬೇಡ. ನೀವು ಒಂದು ಸಲ ಮಂಜೂರಾತಿ ಕೊಟ್ಟಿದ್ದನ್ನು ಕಾರ್ಯಗತಗೊಳಿಸಿ ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.